## 2017 ಕ.ತೀ.ವ. 233

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

### ಶ್ರೀ ಮರಿಯಪ್ಪ (ಮೃತ) ಕಾನೂನು ಸಮ್ಮತ ವಾರಸುದಾರರು –ವಿರುದ್ಧ– ಸಹಾಯಕ ಆಯುಕ್ತರು ಭೂ ಆರ್ಜನೆ ಅಧಿಕಾರಿ ಮತ್ತು ಇನ್ನೊಬ್ಬರು *

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 115ರಡಿಯಲ್ಲಿ ಸಿವಿಲ್ ಪರಿಷ್ಕರಣಾ ಅರ್ಜಿ.

ಅರ್ಜಿದಾರರು ಮೂಲ ದಾವಾದಾರನ ಕಾನೂನು ಪ್ರತಿನಿಧಿಗಳಾಗಿದ್ದು, ಮೂಲ ದಾವಾದಾರನು ಸಲ್ಲಿಸಿದ್ದ ಜಾರಿ ಅರ್ಜಿಯು ಪ್ರಕರಣವನ್ನು ನಡೆಸದಿದ್ದರಿಂದ ವಜಾಗೊಂಡಿದ್ದರಿಂದ, ಮೂಲ ದಾವಾದಾರನ ಮರಣದ ನಂತರ ಆತನ ಕಾನೂನು ಪ್ರತಿನಿಧಿಗಳು ಸಲ್ಲಿಸಿದ ಅರ್ಜಿಯು ಕಾಲ ವಿಳಂಬಿತವೆಂದು ತಿರಸ್ಕರಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿ.

1963ರ ಕಾಲ ಪರಿಮಿತಿ ಕಾಯಿದೆ ಅನುಚ್ಛೇದ 136ರನ್ವಯ ಅರ್ಜಿದಾರರು ನಿಯಮಿತಿ 12 ವರ್ಷಗಳೊಳಗಾಗಿ ಜಾರಿ ಅರ್ಜಿಯನ್ನು ಸಲ್ಲಿಸದಿದ್ದುದರಿಂದ, ಅಧಿವಿಚಾರಣಾ ನ್ಯಾಯಾಲಯದ ಆದೇಶದಲ್ಲಿ ಯಾವುದೇ ದೋಷವಿಲ್ಲವೆಂದು ಅಭಿಪ್ರಾಯಪಟ್ಟು, ಉಚ್ಚ ನ್ಯಾಯಾಲಯವು, ಸದರಿ ಪರಿಷ್ಕರಣಾ ಅರ್ಜಿಯನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು:* *ಪ್ಯಾರಾಗಳಲ್ಲಿ*

*1. (1974)2 ಎಸ್‌ಸಿಸಿ 171*
*ಪ್ರೇಮ್ ರಾಜ್ –ವಿರುದ್ಧ– ರಾಮ್ ಚರಣ್ (ಉಲ್ಲೇ) 8*

* ಸಿವಿಲ್ ಪುನರವಲೋಕನ ಅರ್ಜಿ ಸಂಖ್ಯೆ: 404/2014, ದಿನಾಂಕ: 28ನೇ, ಜುಲೈ 2016.

*2. (1999) 8 ಎಸ್‌ಸಿಸಿ 315*
*ಡಬ್ಲ್ಯು.ಬಿ. ಎಸೆನ್ಷಿಯಲ್ ಕಮಾಡಿಟೀಸ್ ಸಪ್ಲೈ ಕಾರ್ಪೋರೇಷನ್ –ವಿರುದ್ಧ– ಸ್ವದೇಶ್ ಆಗ್ರೋ ಫಾರ್ಮಿಂಗ್ ಅಂಡ್ ಸ್ಟೋರೇಜ್ ಪ್ರೈ.ಲಿ.* *(ಉಲ್ಲೇ) 10*

*3. (2007) 2 ಎಸ್‌ಸಿಸಿ 230*
*ರಘುನಾಥ್ ರಾಯ್ ಬರೇಜಾ –ವಿರುದ್ಧ– ಪಂಜಾಬ್ ನ್ಯಾಷನಲ್ ಬ್ಯಾಂಕ್* *(ಉಲ್ಲೇ) 11*

ಅರ್ಜಿದಾರರ ಪರ : ಶ್ರೀ ವಿ.ಎಫ್. ಕುಂಬಾರ್, ವಕೀಲರು.
ಪ್ರತ್ಯರ್ಜಿದಾರರ ಪರ :

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ :**

ಈ ಅರ್ಜಿಯನ್ನು, ಪ್ರಕರಣವನ್ನು ವಾಯಿದೆ ಮೀರಿದೆಯೆಂದು ಅಭಿಪ್ರಾಯಪಟ್ಟು ಹಿರಿಯ ಸಿವಿಲ್ ನ್ಯಾಯಾಧೀಶರು, ದೊಡ್ಡಬಳ್ಳಾಪುರ ಇವರು ಇಎಕ್ಸ್.ಪಿ.ಸಂ.16/2004ರಲ್ಲಿ ಹೊರಡಿಸಿದ 14.7.2014ರಂದಿನ ಆದೇಶವನ್ನು ರದ್ದುಪಡಿಸಬೇಕೆಂದು ಸಲ್ಲಿಸಲಾಗಿರುತ್ತದೆ.

2. ಸಂಕ್ಷಿಪ್ತವಾಗಿ ಪ್ರಕರಣದ ವಾಸ್ತವಾಂಶಗಳು ಹೀಗಿವೆ, ಎಂದರೆ, ಮೃತ ಅರ್ಜಿದಾರನ ಜಮೀನನ್ನು ಭೂ ಆರ್ಜನೆ ಅಧಿನಿಯಮ, 1894ರ ಉಪಬಂಧಗಳಡಿಯಲ್ಲಿ ಆರ್ಜಿಸಿಕೊಳ್ಳಲಾಗಿತ್ತು. ಭೂ ಆರ್ಜನೆ ಮಾಡಿಕೊಳ್ಳಲಾದ ಭೂಮಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಭೂ ಆರ್ಜನೆ ಅಧಿಕಾರಿಯು ಹೊರಡಿಸಿದ ಐತೀರ್ಪನ್ನು ಒಪ್ಪಿಕೊಳ್ಳದಿರುವುದರಿಂದ, 18ನೇ ಪ್ರಕರಣದಡಿಯಲ್ಲಿ ರೂಪಿಸಿದ ಉಲ್ಲೇಖವನ್ನು, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಬೆಂಗಳೂರು

ಗ್ರಾಮಾಂತರ ಜಿಲ್ಲೆ, ಬೆಂಗಳೂರಿನ ಕಡತದ ಮೇಲೆ ಎಲ್.ಎ.ಸಿ.ಸಂಖ್ಯೆ 165/1984ಎಂದು ನೋಂದಾಯಿಸಿಕೊಳ್ಳಲಾಗಿತ್ತು. ವಿಚಾರಣೆಯನ್ನು ನಡೆಸಿದ ತರುವಾಯ, 05.02.1992ನೇ ದಿನಾಂಕದ ತೀರ್ಪಿನ ಮೂಲಕ ಉಲ್ಲೇಖವನ್ನು ಒಪ್ಪಿಕೊಳ್ಳಲಾಯಿತು ಮತ್ತು ಶಾಸನಾತ್ಮಕ ಸೌಲಭ್ಯಗಳೊಂದಿಗೆ ಹೆಚ್ಚಿಸಲಾದ ಪರಿಹಾರದ ಐತೀರ್ಪನ್ನು ನೀಡಲಾಯಿತು. ಐತೀರ್ಪನ್ನು ಜಾರಿಗೊಳಿಸಲು ನಿಶಾನೆ ಪಿ.ಸಂಖ್ಯೆ 84/1992ನ್ನು ಸಲ್ಲಿಸಲಾಯಿತು. ಆದಾಗ್ಯೂ ಮೊಕದ್ದಮೆಯನ್ನು ದಿನಾಂಕ: 23.12.1995ರಂದು ಕ್ರಮವಹಿಸದೇ ಇರುವ ಕಾರಣಕ್ಕಾಗಿ ವಜಾಗೊಳಸಲಾಯಿತು. ನಿಶಾನೆ ಪಿ.ಸಂಖ್ಯೆ 16/2004ನ್ನು, ಐತೀರ್ಪನ್ನು ಜಾರಿಗೊಳಿಸಲು ಅಂದರೆ ಬಾಕಿಯಿರುವ ಐತೀರ್ಪಿನ ಮೊಬಲಗಿನ ವಸೂಲಿಗೆ 16.6.2004ರಂದು ಸಲ್ಲಿಸಲಾಯಿತು. ಡಿಕ್ರಿಧಾರಕನು ಮರಣ ಹೊಂದಿರುವುದರಿಂದ, ಆತನ ಕಾನೂನು ಬದ್ಧ ವಾರಸುದಾರರು ಪ್ರಕರಣವನ್ನು ಮುಂದುವರೆಸಿರುತ್ತಾರೆ. ಇಎಕ್ಸ್.ಪಿ.ಸಂಖ್ಯೆ 16/2004ರಲ್ಲಿ ತೀರ್ಪುಋಣಿ ಸಂ.2 ಎಂದು ಸೂಚಿಸಿರುವ ಪ್ರತ್ಯರ್ಜಿದಾರ ಸಂ.2ರವರು ವಾಯಿದೆ ಮೀರಿದೆ ಎಂಬ ಆಧಾರದ ಮೇಲೆ ಜಾರಿ ಅರ್ಜಿಯ ಊರ್ಜಿತತ್ವಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಎತ್ತಿರುತ್ತಾರೆ. ವಾಯಿದೆ ಮೀರಿದೆ ಎಂದು ಅರ್ಜಿಯನ್ನು ಜಾರಿ ನ್ಯಾಯಾಲಯವು ವಜಾ ಮಾಡಿರುವುದರಿಂದ, ಈ ಅರ್ಜಿಯನ್ನು ಸಲ್ಲಿಸಲಾಗಿದೆ.

3. ಮಾನ್ಯ ನ್ಯಾಯವಾದಿಗಳಾದ ಶ್ರೀ ವಿ.ಎಫ್. ಕುಂಬಾರ್‌ರವರು, ಪ್ರಾಸಿಕ್ಯೂಷನ್‌ಯೇತರ ಇಎಕ್ಸ್.ಪಿ.ನಂ.84/1992ನ್ನು ವಜಾಗೊಳಿಸಿದ ತರುವಾಯ ಇಎಕ್ಸ್.ಪಿ.ಸಂ.16/2004ನ್ನು ಸಲ್ಲಿಸಲಾಗಿರುತ್ತದೆ, ಇದು ಇಎಕ್ಸ್.ಪಿ.ಸಂ. 84/1992ನ್ನು ಮತ್ತೆ ಆರಂಭಿಸಿರುವುದಲ್ಲದೆ, ಬೇರೆ ಏನೂ ಆಗಿರುವುದಿಲ್ಲ. ಅಧೀನ ನ್ಯಾಯಾಲಯವು ಆದೇಶವನ್ನು ಹೊರಡಿಸಿ, ಮೊಕದ್ದಮೆಯನ್ನು ವಜಾಗೊಳಿಸಿ ದೋಷವನ್ನು ಎಸಗಿದೆ ಎಂದು ನಿವೇದಿಸಿಕೊಂಡಿರುತ್ತಾರೆ. ಇಎಕ್ಸ್.ಪಿ. ಸಂ. 84/1992ನ್ನು ವಜಾಗೊಳಿಸಿದ ತರುವಾಯ ಕೆಲವು ಸಂದಾಯಗಳನ್ನು ಮಾಡಲಾಗಿದ್ದು, ಬಾಕಿ ಐತೀರ್ಪು ಮೊಬಲಗಿನ ವಸೂಲಿಗೆ ಸಂಬಂಧಿಸಿದಂತೆ ಇಎಕ್ಸ್.ಪಿ.ಸಂ. 16/2004ನ್ನು ಸಲ್ಲಿಸಲಾಗಿದ್ದು, ಪ್ರಶ್ನಿತ ಆದೇಶವು ಹಸ್ತಕ್ಷೇಪದ ಅಗತ್ಯವನ್ನು ಬಯಸುತ್ತದೆ ಎಂದು ನಿವೇದಿಸಿಕೊಂಡಿರುತ್ತಾರೆ.

4. ಶ್ರೀ ವಿ.ಎಫ್. ಕುಂಬಾರ್‌ರವರು ನೀಡಿದ ದಾಖಲೆಗಳನ್ನು ಪರಿಶೀಲಿಸಿ, ಮಾಡಿಕೊಂಡ ನಿವೇದನೆಗಳನ್ನು ಪರಿಗಣಿಸಲಾಗಿರುತ್ತದೆ. ಪ್ರಸ್ತುತ ಪರಿಗಣಿಸಬೇಕಾದ ಅಂಶವೆಂದರೆ, ಅಧೀನ ನ್ಯಾಯಾಲಯವು, ಎರಡನೇ ಜಾರಿ ಅರ್ಜಿಯನ್ನು ಕಾಲ ವಿಳಂಬಿತವಾಗಿದೆಯೆಂದು ವಜಾ ಮಾಡಿರುವುದು ಸಮರ್ಥನೀಯವಾಗಿದೆಯೇ?

5. ಎಲ್‌ಎಸಿ ಸಂ.165/1984ನ್ನು ಅಂಗೀಕರಿಸಲಾಗಿರುತ್ತದೆ. 05.02.1992ನೇ ದಿನಾಂಕದ ಐತೀರ್ಪನ್ನು ಪರಾಮರ್ಶನ ನ್ಯಾಯಾಲಯವು ಹೊರಡಿಸಿದೆ. ಐತೀರ್ಪನ್ನು ಜಾರಿ ಮಾಡಲು, ನಿಶಾನೆ ಪಿ.ಸಂ.84/1992ನ್ನು ಸಲ್ಲಿಸಲಾಗಿದ್ದು, ಸದರಿ ಅರ್ಜಿಯನ್ನು 23.12.1995ರಂದು, ಕ್ರಮ ಜರುಗಿಸದೆ ಇರುವುದಕ್ಕೆ ಸಂಬಂಧಿಸಿದಂತೆ ವಜಾಗೊಳಿಸಲಾಗಿರುತ್ತದೆ. ಆ ತರುವಾಯ, ದೀರ್ಘಕಾಲೀನವಾಗಿ ನಿಶಾನೆ ಪಿ. ಸಂ.16/2004ನ್ನು ಸಲ್ಲಿಸಲಾಗಿರುತ್ತದೆ. ಕಾಲ ಪರಿಮಿತಿ ನಿಷೇಧದ ಆಧಾರದ ಮೇಲೆ ಅಧೀನ ನ್ಯಾಯಾಲಯವು ಕಾಲ ವಿಳಂಬವಾಗಿದೆಯೆಂದು ಅಭಿಪ್ರಾಯಪಟ್ಟು 14.7.2014ರಂದು ಒಂದು ಆದೇಶವನ್ನು ಹೊರಡಿಸಿದ್ದು, ಅದರ ಊರ್ಜಿತತ್ವಕ್ಕೆ ಸಂಬಂಧಿಸಿದಂತೆ ತೀರ್ಪು ಋಣಿ ಸಂ.2ರವರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

6. ಕಾಲಪರಿಮಿತಿ ಅಧಿನಿಯಮ, 1963 (ಸಂಕ್ಷಿಪ್ತವಾಗಿ 'ಅಧಿನಿಯಮ' ಎಂದು ಕರೆಯಲಾಗಿದೆ) ನ್ನು ಇಲ್ಲಿ ಉದ್ಧರಿಸುವುದು ಸೂಕ್ತವಾದುದಾಗಿದ್ದು ಅದು ಈ ಮುಂದಿನಂತಿರುತ್ತದೆ:

| ದಾವೆಯ ಬಗೆ | ಕಾಲಪರಿಮಿತಿಯ ಅವಧಿ | ಅವಧಿಯು ಪ್ರಾರಂಭವಾಗುವ ಕಾಲ |
|---|---|---|
| 136. ಯಾವುದೇ ಸಿವಿಲ್ ನ್ಯಾಯಾಲಯದ (ಆಜ್ಞಾಪಕ ನಿರ್ಬಂಧಕಾಜ್ಞೆಯನ್ನು | ಹನ್ನೆರಡು ವರ್ಷಗಳು | ಡಿಕ್ರಿ ಅಥವಾ ಆದೇಶವು ಜಾರಿಯೋಗ್ಯವಾಗಿರುವಲ್ಲಿ ಅಥವಾ ಡಿಕ್ರಿ ಅಥವಾ ಯಾವುದೇ ಅನಂತರದ ಆದೇಶವು ಹಣದ ಯಾವುದೇ |

| | | |
|---|---|---|
| ನೀಡುವ ಡಿಕ್ರಿಯ ಹೊರತಾದ ಯಾವುದೇ ಡಿಕ್ರಿ ಅಥವಾ ಆದೇಶದ ಜಾರಿಗಾಗಿ | | ಸಂದಾಯವನ್ನು ಇಲ್ಲವೇ ಯಾವುದೇ ಸ್ವತ್ತಿನ ವಶಾವಣೆಯನ್ನು ಒಂದು ನಿಶ್ಚಿತ ದಿನಾಂಕದಲ್ಲಿ ಅಥವಾ ಆವರ್ತಕ ಅವಧಿಗಳಲ್ಲಿ ಮಾಡಬೇಕೆಂದು ನಿರ್ದೇಶಿಸಿರುವಲ್ಲಿ ಯಾವುದರ ಸಂಬಂಧದಲ್ಲಿ ಜಾರಿಯನ್ನು ಕೇಳಲಾಗಿದೆಯೋ, ಆ ಸಂದಾಯ ಅಥವಾ ವಶಾವಣೆಯನ್ನು ಮಾಡಲು ತಪ್ಪಿದಾಗಿನಿಂದ ಪರಂತು ಒಂದು ಡಿಕ್ರಿಯ ಜಾರಿ ಅಥವಾ ನಿರ್ವಹಣೆಗಾಗಿ ಮಾಡಿದ ಆವೇದನವು ಯಾವುದೇ ಕಾಲ ಪರಿಮಿತಿಯ ಅವಧಿಗೆ ಒಳಪಟ್ಟಿರತಕ್ಕದ್ದಲ್ಲ. |

7. ಕ್ಲೇಮುದಾರನ ಜಮೀನಿನ ಆರ್ಜನೆಗೆ ಸಂಬಂಧಿಸಿದಂತೆ ಹಣ ಸಂದಾಯಕ್ಕಾಗಿನ ಕ್ಲೇಮುದಾರರ ಹೆಸರಿನಲ್ಲಿ ಎಲ್‌ಎಸಿ ಸಂ.165/1984ರಲ್ಲಿ ಹೊರಡಿಸಿದ ಐತೀರ್ಪನ್ನು ಹೊರಡಿಸಿದ ಕೂಡಲೇ ಜಾರೀ ಯೋಗ್ಯವಾಗಿರುತ್ತದೆ. ಆದ್ದರಿಂದ, ಜಾರಿ ಅರ್ಜಿಯನ್ನು, ಐತೀರ್ಪಿನ ಜಾರಿಗೆ ಯಾವುದೇ ನಿರ್ಬಂಧಕಾಜ್ಞೆಯು ಇಲ್ಲದಿರುವುದರಿಂದ ತೀರ್ಪಿನ ದಿನಾಂಕದಿಂದ 12 ವರ್ಷಗಳ ಅವಧಿಯೊಳಗೆ ಸಲ್ಲಿಸಬೇಕೆಂದು ಅಗತ್ಯಪಡಿಸಲಾಗಿರುತ್ತದೆ. ಇಎಕ್ಸ್ ಪಿ.ಸಂ.84/1992ನ್ನು 12 ವರ್ಷಗಳ ಅವಧಿಯೊಳಗೆ ಸಲ್ಲಿಸಿದ್ದಾಗ್ಯೂ, ಕಾರ್ಯ ತತ್ಪರತೆಯಿಂದ ಅದನ್ನು ಮುಂದುವರೆಸಿರುವುದಿಲ್ಲ ಹಾಗೂ 23.12.1995ರಂದು ಕ್ರಮ ಜರುಗಿಸದ ಕಾರಣಕ್ಕಾಗಿ ವಜಾಗೊಳಿಸಲಾಗಿರುತ್ತದೆ. ನಿಶಾನೆ ಪಿ.ಸಂ.16/2004ನ್ನು 16.6.2004ರಂದು ಅಂದರೆ

ಐತೀರ್ಪನ್ನು ಹೊರಡಿಸಿದ ದಿನಾಂಕದಿಂದ 12 ವರ್ಷಗಳ ಅವಧಿಯು ಮೀರಿದ ತರುವಾಯ ಸಲ್ಲಿಸಲಾಗಿದೆ.

8. ಸರ್ವೋಚ್ಚ ನ್ಯಾಯಾಲಯದ ***ಪ್ರೇಮ್ ರಾಜ್ –ವಿರುದ್ಧ– ರಾಮ್ ಚರಣ್*** [1]**,** ಪ್ರಕರಣದಲ್ಲಿ (1) ಡಿಕ್ರಿ ಧಾರಕನ ದೋಷವಿಲ್ಲದೆ ಅರ್ಜಿಯು, ಕಾನೂನಿನ ದೃಷ್ಟಿಯಲ್ಲಿ ಇತ್ಯರ್ಥವಾಗದಿದ್ದಲ್ಲಿ ಅಥವಾ ವಜಾಗೊಂಡಿದ್ದಲ್ಲಿ, ಮತ್ತು (2) ಎರಡು ಅರ್ಜಿಗಳ ವ್ಯಾಪ್ತಿ ಮತ್ತು ಸ್ವರೂಪಗಳು ಒಂದೇ ರೀತಿಯಾಗಿದ್ದಲ್ಲಿ, ಹಿಂದಿನ ಜಾರಿ ಅರ್ಜಿಯನ್ನು ಮುಂದುವರೆಸುವಂತೆ ಅಥವಾ ಪುನರವಲೋಕನ ಮಾಡುವಂತೆ, ಯಾವುದನ್ನಾದರೂ ಒಂದನ್ನು ಕೋರಬಹುದಾಗಿರುತ್ತದೆಂದು ಅಭಿಪ್ರಾಯಪಡಲಾಗಿರುತ್ತದೆ. ಜಾರಿಗೆ ಸಂಬಂಧಿಸಿದಂತೆ ಹಿಂದಿನ ಅರ್ಜಿಯನ್ನು, ಜಾರಿ ನ್ಯಾಯಾಲಯದಿಂದ ಸರಿಯಾಗಿ ಮತ್ತು ಅಂತಿಮವಾಗಿ ಜಾರಿಯಾಗಿರುವುದಕ್ಕೆ ಸಂಬಂಧಿಸಿದಂತೆ ವಿಲೆಗೊಳಿಸಲಾಗಿದೆಯೆಂದೂ, ತರುವಾಯದ ಅರ್ಜಿಯನ್ನು ಅದರ ಮುಂದುವರಿಕೆಯ ಭಾಗವೆಂದು ಅಥವಾ ಪುನರವಲೋಕನದ ಅರ್ಜಿಯೆಂದು ಹೇಳಲಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆ.

9. ಪ್ರಸ್ತುತ ಪ್ರಕರಣದಲ್ಲಿ, ನಿಶಾನೆ ಪಿ.ಸಂ.84/1992ನ್ನು ಪ್ರಾಸಿಕ್ಯೂಷನ್ ನಡೆಸದಿರುವುದಕ್ಕೆ ಸಂಬಂಧಿಸಿದಂತೆ ಅಂದರೆ ಪ್ರಕರಣವನ್ನು ಪ್ರಾಸಿಕ್ಯೂಟ್ ಮಾಡಲು ಡಿಕ್ರಿಧಾರಕನ ವೈಫಲ್ಯದ ಕಾರಣದ ಮೇಲೆ ದಿನಾಂಕ 23.12.1995ರಂದು ವಜಾಗೊಳಿಸಲಾಗಿರುತ್ತದೆ. ಹಾಗಾಗಿ, ನಿಶಾನೆ ಪಿ.ಸಂ.16/2004 ಅಂದರೆ, 16.4.2004ರಂದು ಸಲ್ಲಿಸಿದ ಎರಡನೇ ಜಾರಿ ಅರ್ಜಿಯು ಮೊದಲನೆ ಜಾರಿ ಅರ್ಜಿಯನ್ನು ಮುಂದುವರೆಸುವ ಅಥವಾ ಪುನರವಲೋಕಿಸುವುದಕ್ಕೆ ಸಂಬಂಧಿಸಿದ ಅರ್ಜಿಯಾಗಿರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ನಿಶಾನೆ. ಪಿ.ಸಂ.84/1992ನ್ನು ಇತ್ಯರ್ಥಗೊಳಿಸಲು ಬಾಕಿ ಇಡುವಂತಿಲ್ಲವೆಂಬುದು ಸದರಿ ಆದೇಶದಿಂದ ಸ್ಪಷ್ಟವಾಗಿದೆ. ಹಾಗಾಗಿ ಎರಡನೇ ಜಾರಿ ಅರ್ಜಿಯು ಐತೀರ್ಪಿನ ಜಾರಿಗೆ ಸಂಬಂಧಿಸಿದಂತೆ

1. (1974)2 ಎಸ್‌ಸಿಸಿ 171

ಸಲ್ಲಿಸಿದ ಸ್ವತಂತ್ರ ಅರ್ಜಿಯಾಗಿರುವುದರಿಂದ ನಿಶಾನೆ ಪಿ.ಸಂ.16/2004, ನಿಶಾನೆ ಪಿ.ಸಂ.84/1992ರ ಪುನರವಲೋಕನಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯಾಗಿರದೆ ಬೇರೆ ಅರ್ಜಿಯಾಗಿದೆ ಅದರಲ್ಲಿ ಯಾವುದೇ ಹುರುಳಿರುವುದಿಲ್ಲವೆಂಬುದು ವಾದವಾಗಿರುತ್ತದೆ.

10. ***ಡ.ಬ್ಲ್ಯು.ಬಿ. ಎಸೆನ್ಷಿಯಲ್ ಕಮಾಡಿಟೀಸ್ ಸಪ್ಲೈ ಕಾರ್ಪೋರೇಷನ್ –ವಿರುದ್ಧ– ಸ್ವದೇಶ್ ಆಗ್ರೊ ಫಾರ್ಮಿಂಗ್ ಅಂಡ್ ಸ್ಟೋರೇಜ್ ಪ್ರೈ.ಲಿ.*** [2], ಪ್ರಕರಣದಲ್ಲಿ ಹಣದ ವಸೂಲಿಗೆ ಸಂಬಂಧಿಸಿದಂಥ ದಾವೆಯನ್ನು 08.03.1982ರಂದು ಡಿಕ್ರಿ ಮಾಡಿರುವುದು ಹಾಗೂ 09.08.1983ರಂದು ಡಿಕ್ರಿಯನ್ನು ಪಡೆದಿರುವುದು ಮುಖ್ಯವಾದ ವಾಸ್ತವಾಂಶಗಳಾಗಿರುತ್ತವೆ. 05.06.1995ರಂದು ಜಾರಿ ಅರ್ಜಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಡಿಕ್ರಿಯ ಜಾರಿ ಆದೇಶವನ್ನು ಹೊರಡಿಸಿರುತ್ತದೆ. ಆದರೆ, ಪ್ರತ್ಯರ್ಜಿದಾರರು ಸಲ್ಲಿಸಿದ ಅಪೀಲಿನ ಮೇಲೆ, ಉಚ್ಚ ನ್ಯಾಯಾಲಯವು ಜಾರಿ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿ, ಅಧಿನಿಯಮದ 136ನೇ ಅನುಚ್ಛೇದದಡಿಯಲ್ಲಿ ಪರಿಮಿತಿಯ ಮೂಲಕ ಜಾರಿ ಅರ್ಜಿಯನ್ನು ನಿಷೇಧಿಸಲಾಗಿರುತ್ತದೆಂದು ಅಭಿಪ್ರಾಯಪಡಲಾಗಿರುತ್ತದೆ. ಕಾಲಪರಿಮಿತಿ ಅಧಿನಿಯಮ, 1963ರ 136ನೇ ಅನುಚ್ಛೇದದಡಿಯಲ್ಲಿ ಕಾಲಪರಿಮಿತಿಯ ಅವಧಿಯು, ಡಿಕ್ರಿಯಾದ ದಿನಾಂಕದಿಂದ ಆರಂಭವಾಗುತ್ತದೆಯೆ ಅಥವಾ ಡಿಕ್ರಿಯು ವಾಸ್ತವವಾಗಿ ಹೊರಡಿಸಲಾದ ಹಾಗೂ ನ್ಯಾಯಾಧೀಶರು ಸಹಿ ಮಾಡಿದ ದಿನಾಂಕದಿಂದ ಆರಂಭವಾಗುತ್ತದೆಯೆ ಎಂಬ ಪ್ರಶ್ನೆಯನ್ನು ಪರಿಗಣಿಸುವಾಗ ಸರ್ವೋಚ್ಚ ನ್ಯಾಯಾಲಯವು ಸದರಿ ಆದೇಶವನ್ನು ನಿರಾಕರಿಸಿ, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

> " 7. . . . . . . ಒಂದು ಡಿಕ್ರಿ ಅಥವಾ ಆದೇಶವನ್ನು, ಇದು ಕಾರ್ಯ ನಿರ್ವಹಿಸುವಂತಿರುವಾಗ

2. (1999) 8 ಎಸ್‌ಸಿಸಿ 315

ಜಾರಿಗೊಳಿಸಬೇಕಾಗುತ್ತದೆಂದು ಹೇಳಲಾಗಿರುತ್ತದೆ. ಡಿಕ್ರಿಯು ಕಾರ್ಯ ನಿರ್ವಹಿಸಬೇಕಾಗಿರುವುದಕ್ಕೆ ಸಂಬಂಧಿಸಿದಂತೆ, ಇದು ಅಸ್ತಿತ್ವದಲ್ಲಿರಬೇಕು. ಡಿಕ್ರಿಯ ತೀರ್ಪನ್ನು ಉಚ್ಚರಿಸಿದ ಕೂಡಲೇ ಜಾರಿಗೆ ಬರುತ್ತದೆಂದು ಭಾವಿಸಬಹುದಾಗಿರುತ್ತದೆ. ಆದರೆ ತೀರ್ಪಿನ ಉಚ್ಚರಣೆಯ ತರುವಾಯ ಡಿಕ್ರಿಯನ್ನು ಪಡೆದುಕೊಳ್ಳುವುದು ಹಾಗೂ ಸಹಿ ಮಾಡುವುದು ಸ್ವಲ್ಪ ಕಾಲಾವಕಾಶವನ್ನು ತೆಗೆದುಕೊಳ್ಳುತ್ತದೆಂಬುದು ನ್ಯಾಯಿಕ ನೋಟೀಸನ್ನು ನೀಡುವಾಗ ಪರಿಗಣಿಸಬೇಕಾದ ವಾಸ್ತವಾಂಶವಾಗಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯೇ ಸ್ವತಃ ಡಿಕ್ರಿಯನ್ನು ಶೀಘ್ರವಾಗಿ ಹಾಗೂ ತೀರ್ಪು ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಪಡೆದುಕೊಳ್ಳತಕ್ಕದ್ದೆಂದು ಆದೇಶಿಸುತ್ತದೆ. ಡಿಕ್ರಿಯು, ಅದನ್ನು ವಾಸ್ತವವಾಗಿ ಪಡೆದುಕೊಂಡ ಮತ್ತು ಸಹಿ ಮಾಡಿದ ದಿನಾಂಕಗಳೊಂದಿಗೆ ಹೊಂದಿಕೊಂಡಿರುವಾಗ, ಆ ದಿನಾಂಕವು ತೀರ್ಪಿನ ದಿನಾಂಕದೊಂದಿಗೆ ಸ್ಪರ್ದೆಗಿಳಿಯುವುದಿಲ್ಲ. ಈ ಅಸಮಂಜಸತೆಯನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯ 7ನೇ ನಿಯಮದ 20ನೇ ಕ್ರಮಾದೇಶದ ಮೂಲಕ ಸರಿಪಡಿಸಬಹುದು. ಇದರೊಂದಿಗೆ ಡಿಕ್ರಿಯು, ತೀರ್ಪು ಉಚ್ಚಾರವಾದಂಥ ದಿನಾಂಕ ಹಾಗೂ ದಿನವನ್ನು ಭರಿಸತಕ್ಕದ್ದೆಂಬುದನ್ನು ಉಪಬಂಧಿಸುತ್ತದೆ.

xxxxxx xxxxxx xxxxxx

9. ನಿಯಮ 6–ಎ ಯು ತೀರ್ಪಿನ ಕೊನೆ ಕಂಡಿಕೆಯಾಗಿದ್ದು ಇಂಥ ತೀರ್ಪಿನ ಮೂಲಕ ನೀಡಲಾದಂಥ

ಪರಿಹಾರದ ನಿಕೃಷ್ಟ ನಿಬಂಧನೆಗಳಲ್ಲಿಂಯೇ ನಿರೂಪಿತವಾಗತಕ್ಕದ್ದೆಂದು ಆದೇಶಿಸುತ್ತದೆ. ಇದನ್ನು ಡಿಕ್ರಿಯನ್ನು ಪಡೆದುಕೊಳ್ಳುವುದರೊಳಗೆ ತೀರ್ಪಿನ ಉಚ್ಚರಣೆಯ ದಿನಾಂಕದಿಂದ 15 ದಿನಗಳ ಹೊರಗಿನ ಕಾಲ ಮಿತಿಯನ್ನು ನಿರ್ಧರಿಸಬೇಕಾಗಿರುತ್ತದೆ. ಹಾಗೆ ಪಡೆದುಕೊಳ್ಳದ ಡಿಕ್ರಿಯ ಸಂದರ್ಭದಲ್ಲಿ, 6–ಎ ನಿಯಮದ (2)ನೇ ಉಪ–ನಿಯಮದ (ಎ) ಖಂಡವು ಪಕ್ಷಕಾರನನ್ನು, ತೀರ್ಪಿನ ಕೊನೆ ಪ್ಯಾರಾವನ್ನು ಡಿಕ್ರಿಯಂತೆ ಪರಿಗಣಿಸತಕ್ಕದ್ದು ಎಂಬ ಉದ್ದೇಶಕ್ಕಾಗಿ ಮತ್ತು ಅದರ ವಿರುದ್ಧ ಡಿಕ್ರಿಗೆ ಅಪೀಲು ಮಾಡಿದ ಪ್ರತಿಯನ್ನು ದಾಖಲಿಸದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶದ 1ನೇ ನಿಯಮದಡಿಯಲ್ಲಿ ಅಪೀಲನ್ನು ಸಲ್ಲಿಸಲು ಸಮರ್ಥಗೊಳಿಸುತ್ತದೆ. ಅಲ್ಲದೆ, ಜಾರಿಯ ಉದ್ದೇಶಕ್ಕಾಗಿ, ಡಿಕ್ರಿಯನ್ನು ಪಡೆದುಕೊಳ್ಳದಷ್ಟು ದೀರ್ಘಕಾಲಕ್ಕೆ ಸದರಿ ಉಪ–ನಿಯಮದ (ಬಿ) ಖಂಡದಲ್ಲಿ ಉಪಬಂಧವನ್ನು ರೂಪಿಸಿ, ತೀರ್ಪಿನ ಕೊನೆಯ ಪ್ಯಾರಾವನ್ನು ಡಿಕ್ರಿಯಾಗಿರಬೇಕೆಂದು ಭಾವಿಸತಕ್ಕದ್ದು. ಹಾಗಾಗಿ, ಖಂಡ (ಬಿ)ಯು, ಇಡೀ ತೀರ್ಪಿನ ಪ್ರತಿಗೆ ಅರ್ಜಿ ಸಲ್ಲಿಸದೆ, ಕೇವಲ ಕೊನೆ ಪ್ಯಾರಾದ ಪ್ರತಿಗೆ ಅರ್ಜಿ ಸಲ್ಲಿಸಲು ಡಿಕ್ರಿಯನ್ನು ಪಡೆದುಕೊಳ್ಳುವುದಕ್ಕೆ ಮೊದಲೇ ಡಿಕ್ರಿ ಜಾರಿಯಲ್ಲಿ ಹಿತಾಸಕ್ತಿಯಿರುವ ಪಕ್ಷಕಾರನನ್ನು ಸಮರ್ಥಗೊಳಿಸುತ್ತದೆ. ಮುಂದುವರೆದು, ತೀರ್ಪಿನ ಕೊನೆ ಪ್ಯಾರಾವು, ಡಿಕ್ರಿಯನ್ನು ಪಡೆಯಲಾದಾಗ ಜಾರಿಯ ಉದ್ದೇಶಕ್ಕೆ ಅಥವಾ ಯಾವುದೇ ಇತರೆ ಉದ್ದೇಶಗಳಿಗೆ ಡಿಕ್ರಿಯ ಪರಿಣಾಮವು ನಿಂತು ಹೋಗತಕ್ಕದ್ದು ಎಂಬುದನ್ನು ವಿಧಿಸುತ್ತದೆ.

10. ಡಿಕ್ರಿಯ ಜಾರಿಯು ಅನಿವಾರ್ಯವಾದ ಸಂದರ್ಭವಾದಾಗ ತೀರ್ಪನ್ನು ಉಚ್ಚರಿಸಲಾಗಿದೆಯೆಂದು ಹಾಗೂ ಡಿಕ್ರಿಯನ್ನು ಪಡೆಯುವಲ್ಲಿ ವಿಳಂಬವಾಯಿತೆಂಬ ಕಾರಣ ಮಾತ್ರಕ್ಕೆ, ಡಿಕ್ರಿಯನ್ನು ಸಿದ್ಧಪಡಿಸುವವರೆಗೆ ಡಿಕ್ರಿಯನ್ನು ಜಾರಿಗೊಳಿಸಲಾಗುವುದಿಲ್ಲವೆಂದು ಹೇಳಲಾಗುವುದಿಲ್ಲ. ಹಾಗಾಗಿ, ಅನಿವಾರ್ಯವಾಗಿ ಡಿಕ್ರಿಯು ಜಾರಿಯಾಗುವುದು ಒಂದು ನಮೂನೆಯಾಗಿರುತ್ತದೆ ಅಥವಾ ಮತ್ತೊಂದು ತೀರ್ಪಿನ ದಿನಾಂಕದಿಂದ ಕಾಲ ಪರಿಮಿತಿ ಅಧಿನಿಯಮದ 136ನೇ ಅನುಚ್ಛೇದದಡಿಯಲ್ಲಿನ ಕಾಲ ಪರಿಮಿತಿಯ ಅವಧಿಯು ಮೀರುವವರೆಗೆ ಡಿಕ್ರಿಧಾರಕನಿಗೆ ಅವಕಾಶ ಲಭ್ಯವಾಗುತ್ತದೆ ಎಂಬುದಾಗಿರುತ್ತದೆಂಬುದು ತಿಳಿದು ಬರುತ್ತದೆ.

xxxxxx xxxxxx xxxxxx

19. ಕಾಲ ಪರಿಮಿತಿ ಅಧಿನಿಯಮದ ಯೋಜನೆಯಡಿಯಲ್ಲಿ, ವಾದಪತ್ರಗಳಂಥ ಜಾರಿ ಅರ್ಜಿಗಳನ್ನು, ಪರಿಮಿತಿ ಅಧಿನಿಯಮದ ಮೂಲಕ ಗೊತ್ತುಪಡಿಸಿದ ಕಾಲದೊಳಗೆ ನ್ಯಾಯಾಲಯದಲ್ಲಿ ಮಂಡಿಸಬೇಕಾಗಿರುತ್ತದೆ. ಅಪೀಲನ್ನು ಸಲ್ಲಿಸಿದ ಅಪೀಲುದಾರನಂಥ ಡಿಕ್ರಿಯ ಪ್ರಮಾಣೀಕೃತ ಪ್ರತಿಯನ್ನು ಪಡೆದುದಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ಸಮಯವನ್ನು ಹೊರತುಪಡಿಸಿದ ಸೌಲಭ್ಯವನ್ನು ಪಡೆದಿರದಂಥ ಒಬ್ಬ ಡಿಕ್ರಿ–ಧಾರಕನು, ಡಿಕ್ರಿಯನ್ನು ಸಹಿಯೊಂದಿಗೆ ಪಡೆದುಕೊಳ್ಳುವಲ್ಲಿ ನ್ಯಾಯಾಲಯವು

ತೆಗೆದುಕೊಂಡ ಸಮಯವನ್ನು ಕಳೆದು ತುಂಬಾ ಕಡಿಮೆ ಕಾಲವನ್ನು ಕ್ಲೇಮು ಮಾಡಬಹುದು. ವಿಷಯದ ಈ ಹಿನ್ನೆಲೆಯಲ್ಲಿ, ಪಾಟ್ನಾ ಹಾಗೂ ಕಲ್ಕತ್ತಾಗಳ ಉಚ್ಚ ನ್ಯಾಯಾಲಯಗಳು ಚಂದ್ರ ಮೌಳಿ ದೇವ –ವಿರುದ್ಧ– (ಎಐಆರ್ (1976) ಪಾಟ್ನಾ 208) *ಕುಮಾರ್ ಬಿನೊಯಾ ನಂದ ಸಿಂಗ್ ಮತ್ತು ಸುಂದರಲಾಲ್ ಅಂಡ್ ಸನ್ಸ್ – ವಿರುದ್ಧ– ಯೋಗೇಂದ್ರನಾಥ್ ಸಿಂಗ್* (ಎಐಆರ್ (1976) ಕಲ್ಕತ್ತಾ 471) ಪ್ರಕರಣಗಳಲ್ಲಿ ನ್ಯಾಯಾಲಯುವು ಸರಿಯಾಗಿಯೇ ಕಾನೂನನ್ನು ವಿಧಿಸಿರುತ್ತವೆ; ಇದಕ್ಕೆ ವಿರುದ್ಧವಾಗಿ, ರಾಮ್‌ಕೃಷ್ಣ ತಾರಫದ್ದಾರ್ –ವಿರುದ್ಧ– ನೆಮಾಯಿ ಕೃಷ್ಣ ತಾರಫದ್ದಾರ್ (ಎಐಆರ್ (1974) ಕಲ್ಕತ್ತಾ 173) ಪ್ರಕರಣದಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯುವು ವ್ಯಕ್ತಪಡಿಸಿದ ತೀರ್ಪು ದೋಷಪೂರ್ಣವಾದುದಾಗಿರುತ್ತದೆ. ಕಾಲ ಪರಿಮಿತಿ ಅಧಿನಿಯಮದ 5ನೇ ಪ್ರಕರಣವು ಯಾವುದೇ ಅನ್ವಯನವನ್ನು ಹೊಂದಿರುವುದಿಲ್ಲ. ಕಾಲಪರಿಮಿತಿ ಅಧಿನಿಯಮದ 12(2)ನೇ ಪ್ರಕರಣವು ಜಾರಿ ಅರ್ಜಿ ಸಲ್ಲಿಸಲು ಅಸಮರ್ಥವಾದುದಾಗಿರುತ್ತದೆ. ಕಾಲವನ್ನು ಡಿಕ್ರಿಯ ದಿನಾಂಕದಿಂದ ಪರಿಗಣಿಸದೆ, ಅದನ್ನು ಸಿದ್ಧಪಡಿಸಿದ ದಿನಾಂಕದಿಂದ ಪರಿಗಣಿಸಿದಲ್ಲಿ, ಅದು ಕಾಲ ಪರಿಮಿತಿ ಅಧಿನಿಯಮದ ಉಪಬಂಧಗಳು ಮತ್ತು ಸ್ಪಷ್ಟವಾಗಿ ಅನುಮತೀಯವಲ್ಲದಂಥ ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ನಿಯುಮದ 20ನೇ ಕ್ರಮಾದೇಶ ಹಾಗೂ 21ನೇ ಕ್ರಮಾದೇಶಗಳ ಉಪಬಂಧಗಳಿಗೆ ಉಲ್ಲಂಘನೀಯವಾಗಿರುತ್ತದೆ.

> 20. ಪರಿಣಾಮವಾಗಿ, ಕಾಲಪರಿಮಿತಿ ಅಧಿನಿಯಮದ 136ನೇ ಪ್ರಕರಣದಡಿಯಲ್ಲಿನ ಕಾಲ ಪರಿಮಿತಿಯ ಅವಧಿಯ ಡಿಕ್ರಿಯ ದಿನಾಂಕದಿಂದ ಆರಂಭವಾಗುತ್ತದೆಯೇ ಹೊರತು ಡಿಕ್ರಿಯನ್ನು ವಾಸ್ತವಿಕವಾಗಿ ರೂಪಿಸಿದ ಮತ್ತು ನ್ಯಾಯಾಧೀಶರು ಸಹಿ ಮಾಡಿದ ದಿನಾಂಕದಿಂದ ಅಲ್ಲ ಎಂದು ನಾವು ಅಭಿಪ್ರಾಯಪಡುತ್ತೇವೆ. ಆದ್ದರಿಂದ, ನಮಗೆ ಉಚ್ಚ ನ್ಯಾಯಾಲಯದ ಪ್ರಶ್ನಿತ ತೀರ್ಪಿನಲ್ಲಿ ಯಾವುದೇ ಕಾನೂನು ಬಾಹಿರತೆಯನ್ನು ಕಂಡು ಬಂದಿರುವುದಿಲ್ಲ. ಅಪೀಲುಗಳು ವಿಫಲವಾಗಿದ್ದು, ತದನುಸಾರವಾಗಿ ವಜಾಗೊಳಿಸಲಾಗಿರುತ್ತದೆ. ಯಾವುದೇ ವೆಚ್ಚಗಳಿರುವುದಿಲ್ಲ.
> (ಇದಕ್ಕೆ ನನ್ನಿಂದ ಒತ್ತು ನೀಡಲಾಗಿದೆ)

11. ***ರಘುನಾಥ್ ರಾಯ್ ಬರೇಜಾ –ವಿರುದ್ಧ– ಪಂಜಾಬ್ ನ್ಯಾಷನಲ್ ಬ್ಯಾಂಕ್*** [3]**,** ಪ್ರಕರಣದಲ್ಲಿ ಬ್ಯಾಂಕು, ವ್ಯಾಜ್ಯಕಾಲದಲ್ಲಿನ ಹಣದ ವಸೂಲಿ ಹಾಗೂ ಬಡ್ಡಿ ವಸೂಲಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುವುದು ವಾಸ್ತವಾಂಶವಾಗಿರುತ್ತದೆ. 15.01.1987ರಂದು ಇದರ ಹೆಸರಿನಲ್ಲಿ ಒಂದು ಡಿಕ್ರಿಯನ್ನು ಹೊರಡಿಸಲಾಗಿರುತ್ತದೆ. ಜಾರಿ ಅರ್ಜಿಯನ್ನು ತಡವಾಗಿ ಸಲ್ಲಿಸಲಾಗುತ್ತದೆ. ಸರ್ವೋಚ್ಚ ನ್ಯಾಯಾಲಯವು, ಜಾರಿಗಾಗಿ ಅರ್ಜಿ ಸಲ್ಲಿಸಿರುವುದಕ್ಕೆ ಸಂಬಂಧಿಸಿದಂತೆ ಜಾರಿಗೊಳಿಸುವ ಡಿಕ್ರಿಯ ದಿನಾಂಕದಿಂದ 12 ವರ್ಷಗಳ ಅವಧಿಗಾಗಿ ಉಪಬಂಧಿಸಿದ ಅಧಿನಿಯಮದ 136ನೇ ಅನುಚ್ಛೇದದ ಉಲ್ಲೇಖದೊಂದಿಗೆ ವಿಷಯವನ್ನು ಪರಿಗಣಿಸಿ, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

> “9. ಕಾಲಪರಿಮಿತಿ ಅಧಿನಿಯಮ, 1963ರ ಪರಿಶಿಷ್ಟದಲ್ಲಿನ 136ನೇ ಅನುಚ್ಛೇದದಡಿಯಲ್ಲಿ, ಯಾವುದೇ

3. (2007) 2 ಎಸ್‌ಸಿಸಿ 230

> ಡಿಕ್ರಿಯ ಜಾರಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ ಅವಧಿಯು ಡಿಕ್ರಿಯು ಜಾರಿಯಾದ ದಿನಾಂಕದಿಂದ 12 ವರ್ಷಗಳಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಅಂತಿಮ ಡಿಕ್ರಿಯನ್ನು ಹೊರಡಿಸಿ, 15.1.1987ರಂದಿನಿಂದ ಜಾರಿಯಾಗಿರುವುದರಿಂದ, ಅರ್ಜಿಯ ಜಾರಿಯನ್ನು ದಾಖಲಿಸುವುದಕ್ಕೆ ಸಂಬಂಧಿಸಿದ ಪರಿಮಿತಿಯ ಅವಧಿಯು 15.1.1999ರಂದು ಮುಕ್ತಾಯವಾಗುತ್ತದೆ."
>
> (ಇದಕ್ಕೆ ಒತ್ತು ನೀಡಲಾಗಿದೆ)

12. ಪ್ರಸ್ತುತ ಮೊಕದ್ದಮೆಯಲ್ಲಿ 136ನೇ ಅನುಚ್ಛೇದವು ಅನ್ವಯವಾಗುತ್ತಿರುವುದು ಸ್ಪಷ್ಟವಾಗಿದ್ದು, ಅಕ್ಷರಶಃ ನಿಯಮಗಳು ಅನ್ವಯವಾಗುತ್ತವೆ. ಹಾಗಾಗಿ, ನಿಶಾನೆ ಪಿ.ಸಂ.16/2004ನ್ನು ಪರಾಮರ್ಶನ ನ್ಯಾಯಾಲಯವು ಐತೀರ್ಪನ್ನು ಹೊರಡಿಸಿದ ದಿನಾಂಕದಿಂದ 12 ವರ್ಷಗಳ ಅವಧಿಯೊಳಗೆ ಸಲ್ಲಿಸಿರುವುದಿಲ್ಲ. ಹಾಗಾಗಿ, ಸಲ್ಲಿಸಲಾದ ಎರಡನೇ ಜಾರಿ ಅರ್ಜಿಯು ಅಧಿನಿಯಮದ 136ನೇ ಅನುಚ್ಛೇದದಡಿಯಲ್ಲಿ ಕಾಲ ಪರಿಮಿತಿಯಿಂದ ನಿಷೇಧಿತವೆಂದು ಅಧೀನ ನ್ಯಾಯಾಲಯವು ಅಭಿಪ್ರಾಯಪಟ್ಟು ಯಾವುದೇ ತಪ್ಪು ಅಥವಾ ಅಕ್ರಮವನ್ನು ಸಹ ಎಸಗಿರುವುದಿಲ್ಲ.

ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ, ಗುಣಾರ್ಹತೆಗಳಿಲ್ಲದಿರುವುದರಿಂದ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

---